ಕರ್ನಾಟಕ ವಿಧಾನ ಪರಿಷತ್ತು

140ನೇ ಅಧಿವೇಶನ -2020

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ.	1678
ಮಾನ್ಯ ಸದಸ್ಯರ ಹೆಸರು	ಶ್ರೀ ಅ. ದೇವೇಗೌಡ(ಪದವೀಧರ ಕ್ಷೇತ್ರ)
ಉತ್ತರಿಸಬೇಕಾದ ಸಚಿವರು	ಮಾನ್ಯ ಉಪಮುಖ್ಯಮಂತ್ರಿಗಳು(ಉನ್ನತ ಶಿಕ್ಷಣ)
ಉತ್ತರಿಸಬೇಕಾದ ದಿನಾಂಕ	23.03.2020

	ಪ್ರಶ್ನೆ	ಉತ್ತರ
ಅ	ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕೆಂಪೇಗೌಡ ಅಧ್ಯಯನ ಕೇಂದ್ರ ಸ್ಥಾಪಿಸಲು 2002ರಲ್ಲಿ ಪ್ರಸ್ತಾಪಿಸಿದ್ದು, ಇಲ್ಲಿಯವರೆಗೆ ಕೈಗೊಂಡ ಕ್ರಮವೇನು;	ಬೃಹತ್ ಬೆಂಗಳೂರು ಮಹಾನಗರಪಾಲಿಕೆ(ಬಿ.ಬಿ.ಎಂ.ಪಿ) ಸಹಯೋಗದೊಂದಿಗೆ 2002ನೇ ಸಾಲಿನಲ್ಲಿ ಬೆಂಗಳೂರು ವಿಶ್ವವಿದ್ಯಾಲಯವು ತನ್ನ ಆಂತರಿಕ ಸಂಪನ್ಮೂಲಗಳಿಂದ ಭರಿಸಿದ ರೂ 15.00 ಲಕ್ಷಗಳ ಮೂಲಧನದೊಂದಿಗೆ ಆರಂಭಿಸಿದ ನಾಡಪ್ರಭು ಕೆಂಪೇಗೌಡ ಅಧ್ಯಯನ ಕೇಂದ್ರ ಹಾಗೂ ಅಧ್ಯಯನ ಪೀಠವು 2008ನೇ ಸಾಲಿನವರೆಗೆ ಕಾರ್ಯಾಚರಣೆ ನಡೆಸಿದ ತರುವಾಯ ಕೆಲವು ತಾಂತ್ರಿಕ ಕಾರಣಗಳಿಂದ 2009ನೇ ಸಾಲಿನಿಂದ 2015 ನೇ ಸಾಲಿನ ವರೆಗೆ ನಿಷ್ಕ್ರಿಯವಾಗಿದ್ದು, ತದನಂತರದಲ್ಲಿ 2016ನೇ ಸಾಲಿನಿಂದ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದೆ. ಮಾಗಡಿ ತಾಲ್ಲೂಕು ಕೆಂಪಾಪುರ ಗ್ರಾಮದಲ್ಲಿರುವ ನಾಡಪ್ರಭು ಕೆಂಪೇಗೌಡರ ವೀರಸಮಾಧಿಗೆ ಸಂಬಂಧಿಸಿದಂತೆ ಬಿ.ಬಿ.ಎಂ.ಪಿ ಯಿಂದ ವರದಿ ಪಡೆದಿರುವುದು, ನಾಡಪ್ರಭು ಕೆಂಪೇಗೌಡರ ಆಡಳಿತ ಪ್ರದೇಶಗಳ ಕುರಿತು ಸಮಗ್ರ ಕ್ಷೇತ್ರಕಾರ್ಯ ಮಾಡಿರುವುದು, ನಾಡಪ್ರಭು ಕೆಂಪೇಗೌಡರ ಜೀವನ ಹಾಗೂ ಸಾಧನೆಗಳ ಬಗ್ಗೆ ಕಿರು ಸಂಶೋಧನೆಯನ್ನು ಪೂರ್ಣಗೊಳಿಸಿರುವುದು, ನಾಡಪ್ರಭು ಕೆಂಪೇಗೌಡ ಅಧ್ಯಯನ ಕೇಂದ್ರದಲ್ಲಿ ರಾಜವೃಕ್ಷ ಮತ್ತು ವಂಶವೃಕ್ಷಗಳನ್ನು ಸಿದ್ಧಪಡಿಸಿರುವುದು, ನಾಡಪ್ರಭುಗಳ ಜನ್ಮ ದಿನಾಚರಣೆಯನ್ನು ಆಚರಣೆ, ವಿಚಾರ ಸಂಕಿರಣಗಳು/ಉಪನ್ಯಾಸನಗಳ ಆಯೋಜನೆ, ನಾಡಪ್ರಭುಗಳ ಆಡಳಿತದ ಶಾಸನಗಳ ಮುದ್ರಣ ಸೇರಿದಂತೆ ಹಲವಾರು ರಚನಾತ್ಮಕ ಕ್ರಮಗಳನ್ನು ಕೈಗೊಳ್ಳಲಾಗಿದೆ. ಬೆಂಗಳೂರು ವಿಶ್ವವಿದ್ಯಾಲಯದ ಮೂರು ಎಕರೆ ಜಾಗದಲ್ಲಿ ನಾಡಪ್ರಭು ಕೆಂಪೇಗೌಡ ಕೇಂದ್ರದ ಭವನ ನಿರ್ಮಾಣಕ್ಕಾಗಿ ವಿಶ್ವವಿದ್ಯಾಲಯವು ಬಿ.ಬಿ.ಎಂ.ಪಿ.ಯೊಂದಿಗೆ 2016ನೇ ಸಾಲಿನಲ್ಲಿ ಒಡಂಬಡಿಕೆ ಮಾಡಿಕೊಂಡಿದ್ದು, ಈ ಭವನದ ನಿರ್ಮಾಣಕ್ಕಾಗಿ 2017 ನೇ ಸಾಲಿನಲ್ಲಿ ಭೂಮಿ ಪೂಜೆಯನ್ನು ನೆರವೇರಿಸಲಾಗಿದೆ. ಬಿ.ಬಿ.ಎಂ.ಪಿ ಯಿಂದ ಒದಗಿಸಲಾಗಿರುವ ರೂ 50.00 ಕೋಟಿಗಳ ಅನುದಾನದಲ್ಲಿ ನಾಡಪ್ರಭು ಕೆಂಪೇಗೌಡ ಕೇಂದ್ರದ ಭವನ ನಿರ್ಮಾಣಕ್ಕಾಗಿ ಯೋಜಿಸಲಾಗಿರುವ ಮೊದಲ ಕಾಮಗಾರಿಗಳ

		ಅಂದಾಜುಗಳಿಗೆ ನಗರಾಭಿವೃದ್ಧಿ ಇಲಾಖೆಯ ಆದೇಶ ಸಂಖ್ಯೆ:ನಅಇ 32 ಎಂಎನ್‌ವೈ 2019, ದಿನಾಂಕ:05.12.2019ರಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ. ಈ ಆಡಳಿತಾತ್ಮಕ ಅನುಮೋದನೆಯನ್ನು ಅನುಸರಿಸಿ, ಬಿ.ಬಿ.ಎಂ.ಪಿ ಅಧಿಸೂಚನೆ ದಿನಾಂಕ:24.01.2020 ಜೊತೆಯಲ್ಲಿ ಓದಲಾದ ತಿದ್ದುಪಡಿ, ದಿನಾಂಕ:03.02.2020ರನ್ವಯ ಟೆಂಡರ್ ಆಹ್ವಾನಿಸಲಾಗಿದೆ., ಈ ಟೆಂಡರ್ ಪ್ರಕ್ರಿಯೆಯ ಸಂಬಂಧದಲ್ಲಿ ಪ್ರಿ-ಬಿಡ್ ಸಭೆಯನ್ನು ದಿನಾಂಕ:31.03.2020ರಂದು ಏರ್ಪಡಿಸಲಾಗಿದ್ದು, ತಾಂತ್ರಿಕ ಬಿಡ್ ಅನ್ನು ದಿನಾಂಕ:07.04.2020ರಂದು ತೆರೆಯಲಾಗುತ್ತದೆ.
ಆ	ಕ್ರಮಕೈಗೊಳ್ಳದಿದ್ದಲ್ಲಿ, ಸರ್ಕಾರಕ್ಕೆ ಇರುವ ಅಡೆತಡೆಗಳೇನು?	ಉದ್ಭವಿಸುವುದಿಲ್ಲ

ಇಡಿ/63/ಯುಬಿವಿ/2020

(ಡಾ॥ ಅಶ್ವಥ್‌ನಾರಾಯಣ ಸಿ.ಎನ್)

ಉಪಮುಖ್ಯಮಂತ್ರಿಗಳು (ಉನ್ನತ ಶಿಕ್ಷಣ, ಐಟಿ ಮತ್ತು ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ,

ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ)